# ಗಾರ್ಸಿನಿಯಾ ಬ್ರದರ್ಸ್

## ಎಂಬ ಗಾರುಡಿಗರು



ಸೋಮಶೇಖರ ಬಿ ಎಸ್



ಉಪ್ಪಾಗೆ, ಮುರುಗಲು, ದ್ಯಾವಣಿಗೆ ಮತ್ತು ಜೀರ್ಕ ಎಂಬ ನಾವು ನಾಲ್ವರು ಸೋದರವೃಂದವೇ ಗಾರ್ಸಿನಿಯಾ ಬ್ರದರ್ಸ್. ಪಶ್ಚಿಮಘಟ್ಟಗಳು ಮತ್ತು ಅಲ್ಲಿನ ನಿತ್ಯಹರಿದ್ವರ್ಣದ ಕಾಡುಗಳು ನಮ್ಮ ತವರು. ಒಂದರ್ಥದಲ್ಲಿ ಅಂತಃಸ್ಸೀಮಿತ ವ್ಯಾಪನೆ ನಮ್ಮದು. ಉಪ್ಪಾಗೆ ತುಪ್ಪ, ಪುನರ್ಪುಳಿ ಸಿಪ್ಪೆ, ಕೋಕಮ್ ಜ್ಯೂಸು ಎಂಬ ಪರಿಚಿತ ರೂಪಗಳಿಗೆ ಮಾತ್ರವೇ ಸೀಮಿತಗೊಂಡೆವೇನೋ, ಪಶ್ಚಿಮಘಟ್ಟಗಳ ಸರಹದ್ದನ್ನು ಮೀರಿ ಹೊರಹೋಗುವುದು ಕನಸಿನ ಮಾತೇನೋ ಎಂದು ಹಳಹಳಿಸುತ್ತಿದ್ದಾಗ ನಮ್ಮೊಳಗೆ ಹುದುಗಿದ್ದ ಅನನ್ಯವಾದ ಒಂದು ಆರೋಗ್ಯಪರ ಔಷಧೀಯ ರಸಾಯನಿಕವು ನಮಗೊಂದು ಜಾಗತಿಕ ಮನ್ನಣೆಯನ್ನೂ ವಿಶ್ವವ್ಯಾಪನೆಯನ್ನೂ ಗಳಿಸಿಕೊಟ್ಟಿದೆ. ಹೀಗಾಗಿ ಇಂದು ಶಿರಸಿ ಪೇಟೆಯಲ್ಲಿ ಮಾತ್ರವೇ ಅಲ್ಲ, ಅಮೆರಿಕಾದ ಸಿಯಾಟಲ್‌ನಂಥ ಮಹಾನಗರದಲ್ಲೂ ಕೂಡ ನಮ್ಮ ಪರಿಚಯ ಮತ್ತು ಪ್ರಭಾವವು ಗೋಚರಿಸುತ್ತದೆ.

ಸಹ್ಯಾದ್ರಿಶ್ರೇಣಿಯ ನಿತ್ಯಹರಿದ್ವರ್ಣ ಕಾಡುಗಳ ವೃಕ್ಷವರೇಣ್ಯ ವೃಂದದ ಈ ಸ್ವಾರಸ್ಯಕರ ಗಾಥೆಯನ್ನು ನಿಮಗಾಗಿ ಇಲ್ಲಿ ತಂದಿದ್ದೇವೆ.








GLOBAL GREENGRANTS FUND

ಸ್ನೇಹಕುಂಜ, ಲೈಫ್‌ಟ್ರಸ್ಟ್ ಮತ್ತು ಇಂಡಿಕಸ್‌ನ ಜಂಟಿ ಪ್ರಸ್ತುತಿ



ಸೋಮಶೇಖರ ಬಿ ಎಸ್

ಪರಿಸರ ಶಿಕ್ಷಣದಲ್ಲಿ ಪ್ರತಿಷ್ಠಿತ ಫುಲ್‌ಬ್ರೈಟ್ ಫೆಲೋಶಿಪ್ ಗಳಿಸಿದ್ದಾರೆ. "ಜನಸಾಮಾನ್ಯರ ಪರಿಸರ ಪ್ರಜ್ಞೆಯ ಹೆಚ್ಚಳದಲ್ಲಿ ಅರ್ಥವಿಶ್ಲೇಷಣೆಯ ಪಾತ್ರ" ಎಂಬ ವಿಷಯದಲ್ಲಿ ಅಮೆರಿಕಾದ ಐಡಹೋ ವಿಶ್ವವಿದ್ಯಾನಿಲಯದಲ್ಲಿ ಫುಲ್‌ಬ್ರೈಟ್ ಸಂಶೋಧನೆ (2009).

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಪರಿಸರ ವಿಜ್ಞಾನಗಳ ಕೇಂದ್ರದಲ್ಲಿ 1989ರಲ್ಲಿ ಯೋಜನಾ ಸಹಾಯಕನಾಗಿ ಪರಿಸರ ಸಂಶೋಧನಾ ವೃತ್ತಿಯ ಆರಂಭ. ಉತ್ತರಕನ್ನಡ ಜಿಲ್ಲೆಯ ವಿವಿಧೆಡೆ ಪರಿಸರ ಅಧ್ಯಯನ, ಪರಿಸರ ಶಿಕ್ಷಣದ ಕೆಲಸಗಳಲ್ಲಿ ನಿರತ. ಜಾಗತಿಕ ವಾತಾವರಣ ವ್ಯತ್ಯಯದ ಮೇಲೆ ಹೆಚ್ಚಿನ ಅಧ್ಯಯನ.

ಎಫ್‌ಆರ್‌ಎಲ್‌ಎಚ್‌ಟಿ (ಫೌಂಡೇಶನ್ ಫಾರ್ ರಿವೈಟಲೈಸೇಶನ್ ಆಫ್ ಲೋಕಲ್ ಹೆಲ್ತ್ ಟ್ರೆಡಿಶನ್ಸ್, ಬೆಂಗಳೂರು) 1993ರಲ್ಲಿ ಡಾನಿಡಾದ ನೆರವಿನಿಂದ ದಕ್ಷಿಣಭಾರತದ ಅರಣ್ಯ ಇಲಾಖೆಗಳ ಸಹಯೋಗದಲ್ಲಿ ಆರಂಭಿಸಿದ ಔಷಧಿಸಸ್ಯಗಳ ಸಂರಕ್ಷಣಾ ಯೋಜನೆಗೆ ಸೇರ್ಪಡೆ. ದಕ್ಷಿಣಭಾರತದ 35 ವಿವಿಧ ಅರಣ್ಯ ಪ್ರದೇಶಗಳು ಮತ್ತು ದೇಶದ ಇತರ 50 ಅರಣ್ಯತಾಣಗಳಲ್ಲಿ ಅಂದಿನಿಂದ ನಿರಂತರವಾಗಿ ಔಷಧಿಸಸ್ಯಗಳ ಸಂರಕ್ಷಣೆಗಾಗಿ ಆದ್ಯತೆಯ ವಿಷಯಗಳಲ್ಲಿ ಹೆಚ್ಚಿನ ಕ್ಷೇತ್ರಕಾರ್ಯ, ಅಧ್ಯಯನ, ಸಂಶೋಧನೆ, ತರಬೇತಿ, ಶಿಕ್ಷಣದ ಚಟುವಟಿಕೆಗಳಲ್ಲಿ ನಿರತ. ಪ್ರಸಕ್ತದಲ್ಲಿ ಎಫ್‌ಆರ್‌ಎಲ್‌ಎಚ್‌ಟಿಯ ಸಹಾಯಕ ನಿರ್ದೇಶಕ ಮತ್ತು 'ಹೆರಿಟೇಜ್ ಅಮೃತ್' (ಇಂಗ್ಲಿಷ್) ಸಂರಕ್ಷಣಾ ದ್ವೈಮಾಸಿಕದ ಕಾರ್ಯನಿರ್ವಾಹಕ ಸಂಪಾದಕ.

ಸಸ್ಯಸಂಕುಲದೊಂದಿಗೆ ಮಾನವ ಸಮುದಾಯಗಳು ಬೆಳೆಸಿಕೊಂಡಿರುವ ಗಾಢವಾದ ಸಾಂಸ್ಕೃತಿಕ ಒಡನಾಟದ ಕುರಿತು ಹೆಚ್ಚಿನ ಸಂಶೋಧನೆಗಾಗಿ ಇಂಡಿಕಸ್ (ಇನ್‌ಸ್ಟಿಟ್ಯೂಟ್ ಫಾರ್ ಇಂಡಿಜಿನಸ್ ಕಲ್ಚರ್ಸ್ ಅಂಡ್ ಸ್ಟಡೀಸ್)ನ ಜೊತೆಗೂಡಿ 2005ರಿಂದ ವಿವಿಧ ಅಧ್ಯಯನಗಳಲ್ಲಿ ನಿರತ. ಸಮುದಾಯಗಳ ವಿಧಿ-ಪೂಜೆ-ಆಚರಣೆ-ಸಂಪ್ರದಾಯಗಳಲ್ಲಿ ವಿಶೇಷಸ್ಥಾನ ಗಳಿಸಿದ ಸಸ್ಯಗಳ ಕುರಿತು ಹೆಚ್ಚಿನ ಕ್ಷೇತ್ರಕಾರ್ಯ. ಸಂಶೋಧನೆ. ಪ್ರಸಕ್ತದಲ್ಲಿ ಇಂಡಿಕಸ್‌ನ ಗೌರವ ಸಲಹೆಗಾರ.

ಕ್ಯೂ ಸಸ್ಯೋದ್ಯಾನ, ಲಂಡನ್, ಘೆಂಟ್ ವಿವಿ. ಬೆಲ್ಜಿಯಂ, ರಾಷ್ಟ್ರೀಯ ಸಸ್ಯೋದ್ಯಾನ, ವೂಹನ್, ಚೀನಾ ಇಲ್ಲಿ ಉನ್ನತ ಕಿರುಅಧ್ಯಯನ.

**ಪರಿಸರ ಬರವಣಿಗೆ:** ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಹಿತ್ತಲಹೊನ್ನು' ಎಂಬ ಪಾಕ್ಷಿಕ ಅಂಕಣದಡಿ 2002-2007ರ ಅವಧಿಯಲ್ಲಿ ನಿರಂತರವಾಗಿ ಸಾದರಪಡಿಸಿದ ಅಪರೂಪದ ಔಷಧಿಸಸ್ಯಗಳ ಪ್ರೊಫೈಲ್‌ಗಳು ಬಲು ಜನಪ್ರಿಯವಾದವು. 'ಅಡವಿಯ ಮೈದಡವಿ' (ವಿಜ್ಞಾನ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಮತ್ತು 'ಗಾರ್ಡನ್ ಸ್ಪಾಟ್' (ಸೈನ್ಸ್ ರಿಪೋರ್ಟರ್, ಸಿಎಸ್‌ಐಆರ್, ದೆಹಲಿ) ಸಾದರಪಡಿಸಿದ ಇನ್ನೆರಡು ವಿಶೇಷ ಅಂಕಣಗಳು. ಜೀವ ವೈವಿಧ್ಯ, ಔಷಧಿಸಸ್ಯ, ಪರಿಸರ ಸಂರಕ್ಷಣೆಯ ವಿವಿಧ ವಿಷಯಗಳಲ್ಲಿ 300ಕ್ಕೂ ಹೆಚ್ಚಿನ ಜನಪ್ರಿಯ ಲೇಖನ, ಬರಹ, ಅಧ್ಯಾಯಗಳು ವಿವಿಧ ಪತ್ರಿಕೆ, ಸಂಪುಟ, ವರದಿಗಳಲ್ಲಿ ಪ್ರಕಟವಾಗಿವೆ.

**ಈವರೆಗಿನ ಪ್ರಕಟಿತ ಕೃತಿಗಳು:** *ತಾವರೆಯೆಲೆ ಮೇಲಿಟ್ಟ ತುತ್ತು* (2008) ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆ. *ಔಷಧಿಸಸ್ಯಗಳ ಬಳಕೆಗೆ ಬೆಳೆಸಲು ಕೈಪಿಡಿ* (2005), *ಸಂರಕ್ಷಣಾ ಸಂಗತಿ, ಸಂರಕ್ಷಣಾ ಸಂಗಾತಿ, ಸಂರಕ್ಷಣಾ ಸನ್ನಿಧಿ, ಸಂರಕ್ಷಣಾ ಸಮಕ್ಷಮ:* 4-ಸಂಪುಟದ ಔಷಧಿಸಸ್ಯ ಸಂರಕ್ಷಣಾ ಸಂಹಿತೆ (2003), *ಅಂಕಣಚಾಪೆ* (2010), *ಕಾಡು ಎಂಬ ಕಣಜ* (2010). ರಾಜ್ಯ ಅರಣ್ಯ ಇಲಾಖೆಗಳ ಅರಣ್ಯ ತರಬೇತಿ ಸಂಸ್ಥೆಗಳ ಬಳಕೆಗೆ 30 ತರಬೇತಿ ಕೈಪಿಡಿ-ಕ್ಯಾಪ್ಸೂಲ್‌ಗಳ ರಚನೆ. ನವಸಾಕ್ಷರರ ಬಳಕೆಗಾಗಿ 15 ಕಿರುಪುಸ್ತಿಕೆಗಳು, ಇತರ 5 ವಿಷಯಸಂಹಿತೆಗಳ ರಚನೆ.

ಫೋ: 9341835300 ಇಮೈಲ್: bssomashekhar@hotmail.com, cultureindicus@yahoo.in

# ‘ಗಾರ್ಸಿನಿಯಾ ಬ್ರದರ್ಸ್ ಎಂಬ ಗಾರುಡಿಗರು’ ಪುಸ್ತಕ ಬಿಡುಗಡೆ



ಶಿರಸಿ ಡಿ.1: ಪಶ್ಚಿಮ ಘಟ್ಟದ ಪ್ರಮುಖ ಚೌಬೀನೇತರ ಅರಣ್ಯ ಉತ್ಪನ್ನ ಗಳಲ್ಲಿ ಒಂದಾದ ಉಪ್ಪಾಗೆ, ಮುರುಗಲು, ದೇವಣಿಗೆ ಹಾಗೂ ಜೇರ್ಕ ಇವುಗಳ ಕುರಿತ ಪುಸ್ತಕ “ಗಾರ್ಸಿನಿಯಾ ಬ್ರದರ್ಸ್ ಎಂಬ ಗಾರುಡಿಗರು” ಪುಸ್ತಕವನ್ನು ಕರ್ನಾಟಕ ಸರ್ಕಾರದ ಅರಣ್ಯ ಸಚಿವರಾದ ಸಿ. ಪಿ. ಯೋಗೀಶ್ವರ ಅವರು ಬೆಂಗಳೂರಿನ ಅರಣ್ಯ ಭವನದಲ್ಲಿ ನಡೆದ ಅರಣ್ಯ ಉತ್ಪನ್ನಗಳ ಸಂರಕ್ಷಣೆಯ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು. ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ಹಿರಿಯ ಅರಣ್ಯ ಅಧಿಕಾರಿಗಳಾದ ಬಿ.ಕೆ.ಸಿಂಗ್, ವಿನಯ ಲೂತ್ರ, ರಾಜಣ್ಣ, ಶಿವನಗೌಡ, ಪಶ್ಚಿಮ ಘಟ್ಟ ಕಾರ್ಯಪಡೆಯ ಸದಸ್ಯರಾದ ಡಾ. ವಾಸುದೇವಾ, ಡಾ. ಕೇಶವ ಕೊರ್ಸೆ, ಲೇಖಕ ಬಿ.ಎಸ್. ಸೋಮಶೇಖರ್, ನರಸಿಂಹ ಹೆಗಡೆ ಮುಂತಾದವರು ಈ ಸಂದರ್ಭಧಲ್ಲಿ ಹಾಜರಿದ್ದರು.

“ಗಾರ್ಸಿನಿಯಾ ಬ್ರದರ್ಸ್ ಅನ್ನೋ ಹೆಸರೇ ಆಕರ್ಷಕವಾಗಿದೆ”, “ಪುಸ್ತಕದ ಆರಂಭಿಕ ಅಧ್ಯಾಯ ತುಂಬಾ ಹೃದಯ ಸ್ಪರ್ಶಿಯಾಗಿದೆ”, “ಅವಸಾನದ ಅಂಚಿಗೆ ಬಂದಿರೋ ಈ ವೃಕ್ಷ ಬಳಗದ ಸಮಗ್ರ ಮಾಹಿತಿ ಇಲ್ಲಿದೆ”. ಎಂದು ತಿಳಿಸಿದ ಸಚಿವರು ಹೆಚ್ಚಿನ ಜನರಿಗೆ ಅದರಲ್ಲೂ ಗ್ರಾಮೀಣ ಭಾಗದ ಅರಣ್ಯ ಉತ್ಪನ್ನ ಸಂಗ್ರಾಹಕರಿಗೆ ಮತ್ತು ಅರಣ್ಯ ಇಲಾಖೆಯ ಎಲ್ಲ ಹಂತದ ಸಿಬ್ಬಂದಿಗಳಿಗೆ ಇದರ ಪ್ರಯೋಜನ ದೊರೆಯಲೆಂದು ಆಶಿಸಿದರು.

ಪಶ್ಚಿಮಘಟ್ಟಗಳ ಅರಣ್ಯ ಶ್ರೇಣಿಯ ನಿರ್ದಿಷ್ಟಪ್ರದೇಶದಲ್ಲಿ ಮಾತ್ರವೇ ವ್ಯಾಪಿಸಿರುವ ಉಪ್ಪಾಗೆ, ಮುರುಗಲು, ದ್ಯಾವಣಿಗೆ ಮತ್ತು ಅರಿಶಿನ ಅಂಡಿ ಎಂಬ ನಾಲ್ಕು ಅಂತಃಸ್ಸೀಮಿತ ಸೋದರ ವೃಕ್ಷಪ್ರಭೇದಗಳೆ ಈ “ಗಾರ್ಸಿನಿಯಾ ಬ್ರದರ್ಸ್”. ಉಪ್ಪಾಗೆತುಪ್ಪ, ಮುರುಗಲುಹುಳಿ, ಕೋಕಮ್ ಜ್ಯೂಸು, ಅರಿಶಿನಅಂಡಿ ಬಿತ್ತ, ದ್ಯಾವಣಿಗೆ ಉಪ್ಪಿನಕಾಯಿ ಎಂಬಂಥ ಉತ್ಪನ್ನಗಳ ಮೂಲಕವೇ ಪರಿಚಿತವಾಗಿದ್ದ ಪಶ್ಚಿಮಘಟ್ಟಗಳ ಈ ನಾಲ್ಕು ವೃಕ್ಷಪ್ರಭೇದಗಳ ಸಮಗ್ರಮಾಹಿತಿಯನ್ನು ಈ ಪುಸ್ತಕವು, ಆಕರ್ಷಕಶೈಲಿಯಲ್ಲಿ ಮುಂದಿಡುತ್ತದೆ. ಒಂದೇ ಬಳಗಕ್ಕೆ ಸೇರಿದ ಈ ನಾಲ್ಕು ಅಪರೂಪದ ವೃಕ್ಷಪ್ರಭೇದಗಳ ಸಮಗ್ರಕಥನವೇ ಇಲ್ಲಿದೆ. ಈ ಪ್ರಭೇದಗಳ ವನ್ಯಸಂದಣಿಗಳ ವ್ಯಾಪನೆ, ದಟ್ಟಣೆ, ಇವುಗಳ ಪಾರಿಸಾರಿಕ ಅನನ್ಯತೆ, ಆಹಾರ-ಆರೋಗ್ಯ ಸಂಬಂಧಿ ವಿಶೇಷಗುಣಗಳು, ಇವುಗಳಿಂದ ದೊರೆಯುವ ವಿವಿಧ ಉತ್ಪನ್ನಗಳು, ಇವುಗಳ ಪಾರಂಪರಿಕ ಬಳಕೆ, ಈ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ-ವಿತರಣೆಯ-ಮಾರಾಟದ ಜೊತೆಗೆ ಬೆಸೆದು ಕೊಂಡ ವ್ಯವಸ್ಥೆ-ಸಾಮಾಜಿಕ-ಆರ್ಥಿಕ ಅಂಶಗಳು, ಇದರಲ್ಲಿ ಬಲುಹಿಂದಿನಿಂದಲೂ ಪಾಲು ಗೊಂಡಿರುವ ಪಶ್ಚಿಮಘಟ್ಟಗಳ ವಿವಿಧ ಸಮುದಾಯಗಳು, ಅವುಗಳ ಸ್ಥಿತಿಗತಿ, ಈ ಪ್ರಭೇದಗಳ ಪ್ರಸಕ್ತ ಪರಿಸ್ಥಿತಿ, ಇದೆಲ್ಲರಿಂದ ಪ್ರಾದೇಶಿಕ ಪರಿಸರದ ಮೇಲಾಗುತ್ತಿರುವ ಪರಿಣಾಮಗಳು ಇವೇ ಮೊದಲಾದ ವಿವಿಧ ಮಾಹಿತಿಯನ್ನು ಈ ಪುಸ್ತಕವು ಆಮೂಲಾಗ್ರವಾಗಿ ವಿಶ್ಲೇಷಿಸಿ, ಒಂದು ಸಮಗ್ರ ಚಿತ್ರಣವನ್ನು ಮುಂದಿಡುತ್ತದೆ.

ಉತ್ತರಕನ್ನಡವನ್ನು ಕೇಂದ್ರವಾಗಿಟ್ಟುಕೊಂಡು ಕಳೆದೆರಡು ದಶಕಗಳಲ್ಲಿ ಈ ಪ್ರಭೇದಗಳ ಕುರಿತು ನಡೆದಿರುವ ವಿವಿಧ ಸಂಶೋಧನೆ, ಅಧ್ಯಯನ, ಜನಪರ ಕಾರ್ಯಕ್ರಮಗಳ ಒಟ್ಟುನೋಟವನ್ನು ಕೂಡ ಇದು ಮುಂದಿಡುತ್ತದೆ. ಒಂದರ್ಥದಲ್ಲಿ ಇದು ಪಶ್ಚಿಮಘಟ್ಟಗಳ ಅಪರೂಪದ ವೃಕ್ಷಪ್ರಭೇದಗಳ ಪರಿಸರಗಾಥೆಯೇ ಸರಿ.

ಆಕರ್ಷಕ ಶೈಲಿಯ ಆಪ್ತ ಧಾಟಿಯ ನಿರೂಪಣೆಯಿರುವ ಈ ಪುಸ್ತಕವನ್ನು ಪರಿಸರ ವಿಜ್ಞಾನಿ ಬಿ ಎಸ್ ಸೋಮಶೇಖರ ಅವರು ರಚಿಸಿದ್ದು ಲೈಫ್‌ಟ್ರಸ್ಟ್‌ನ ನರಸಿಂಹ ಹೆಗಡೆ, ಅರಣ್ಯ ಕಾಲೇಜಿನ ಡಾ ವಾಸುದೇವ ಮತ್ತು ಪಶ್ಚಿಮಘಟ್ಟ ಕಾರ್ಯಪಡೆಯ ಅನಂತ ಹೆಗಡೆ ಆಶೀಸರ ಅವರ ತಾಂತ್ರಿಕ ಸಮಾಲೋಚನೆಯ ಹಲವು ಒಳನೋಟಗಳು ಇದಕ್ಕೆ ದಕ್ಕಿದೆ. ಸ್ನೇಹಕುಂಜ ಹೊನ್ನಾವರ, ಲೈಫ್ ಟ್ರಸ್ಟ್ ಶಿರಸಿ ಮತ್ತು ಗ್ಲೋಬಲ್ ಗ್ರೀನ್‌ಗ್ರಾಂಟ್‌ನ ನೆರವಿನಿಂದ ಸಿದ್ಧವಾದ ಈ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಅರಣ್ಯ ಸಂರಕ್ಷಣಾ ಸಮಿತಿಗಳು, ಸ್ಥಳೀಯ ಸಮುದಾಯಗಳು ಮತ್ತು ವಿಜ್ಞಾನಿಗಳು ಉಪಸ್ಥಿತರಿದ್ದರು.

ಕನ್ನಡ ಜನಾಂತರಂಗ 1-12-2011

# ಪಶ್ಚಿಮ ಘಟ್ಟದ ಅಪರೂಪ ಅರಣ್ಯ ಉತ್ಪನ್ನ ಕುರಿತ ಪುಸ್ತಕ ಬಿಡುಗಡೆ

ಶಿರಸಿ ಬ್ಯೂರೋ ವರದಿ

ಶಿರಸಿ: ಪಶ್ಚಿಮ ಘಟ್ಟದ ಪ್ರಮುಖ ಚೌಬೀನೇತರ ಅರಣ್ಯ ಉತ್ಪನ್ನಗಳಲ್ಲಿ ಒಂದಾದ ಉಪ್ಪಾಗೆ, ಮುರುಗಲು, ದೇವಣಿಗೆ ಹಾಗೂ ಜೇರ್ಕ ಇವುಗಳ ಕುರಿತ ಪುಸ್ತಕ 'ಗಾರ್ಸಿನಿಯಾ ಬ್ರದರ್ಸ್ ಎಂಬ ಗಾರುಡಿಗರು' ಪುಸ್ತಕವನ್ನು ಕರ್ನಾಟಕ ಸರ್ಕಾರದ ಅರಣ್ಯ ಸಚಿವರಾದ ಸಿ ಪಿ ಯೋಗೀಶ್ವರ ಅವರು ಬೆಂಗಳೂರಿನ ಅರಣ್ಯ ಭವನದಲ್ಲಿ ನಡೆದ ಅರಣ್ಯ ಉತ್ಪನ್ನಗಳ ಸಂರಕ್ಷಣೆಯ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು.

ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷರಾದ ಅನಂತ ಹೆಗಡೆ ಅಶೀಸರ, ಹಿರಿಯ ಅರಣ್ಯ ಅಧಿಕಾರಿಗಳಾದ ಬಿ ಕೆ ಸಿಂಗ್, ವಿನಯ ಲೂತ್ರ, ರಾಜಣ್ಣ, ಶಿವನಗೌಡ, ಪಶ್ಚಿಮ ಘಟ್ಟ ಕಾರ್ಯಪಡೆಯ ಸದಸ್ಯರಾದ ಡಾ ವಾಸುದೇವಾ, ಡಾ ಕೇಶವ ಕೊರ್ಸೆ, ಲೇಖಕ ಬಿ ಎಸ್ ಸೋಮಶೇಖರ್, ನರಸಿಂಹ ಹೆಗಡೆ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.



'ಗಾರ್ಸಿನಿಯಾ ಬ್ರದರ್ಸ್ ಅನ್ನೋ ಹೆಸರೇ ಆಕರ್ಷಕವಾಗಿದೆ, ಪುಸ್ತಕದ ಆರಂಭಿಕ ಅಧ್ಯಾಯ ತುಂಬಾ ಹೃದಯಸ್ಪರ್ಶಿಯಾಗಿದೆ, ಅವಸಾನದ ಅಂಚಿಗೆ ಬಂದಿರೋ ಈ ವೃಕ್ಷಬಳಗದ ಸಮಗ್ರ ಮಾಹಿತಿ ಇಲ್ಲಿದೆ ಎಂದು ತಿಳಿಸಿದ ಸಚಿವರು ಹೆಚ್ಚಿನ ಜನರಿಗೆ ಅದರಲ್ಲೂ ಗ್ರಾಮೀಣ ಭಾಗದ ಅರಣ್ಯ ಉತ್ಪನ್ನ ಸಂಗ್ರಾಹಕರಿಗೆ ಮತ್ತು ಅರಣ್ಯ ಇಲಾಖೆಯ ಎಲ್ಲ ಹಂತದ ಸಿಬ್ಬಂದಿಗಳಿಗೆ ಇದರ ಪ್ರಯೋಜನ ದೊರೆಯಲೆಂದು ಆಶಿಸಿದರು.

ಪಶ್ಚಿಮಘಟ್ಟಗಳ ಅರಣ್ಯಶ್ರೇಣಿಯ ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರವೇ ವ್ಯಾಪಿಸಿರುವ ಉಪ್ಪಾಗೆ, ಮುರುಗಲು, ದ್ಯಾವಣಿಗೆ ಮತ್ತು ಅರಿಶಿನ ಅಂಡಿ ಎಂಬ ನಾಲ್ಕು ಅಂತಃಸ್ಸೀಮಿತ ಸೋದರ ವೃಕ್ಷಪ್ರಭೇದಗಳೇ ಈ 'ಗಾರ್ಸಿನಿಯಾ ಬ್ರದರ್ಸ್' ಉಪ್ಪಾಗೆತುಪ್ಪ, ಮುರುಗಲುಹುಳಿ, ಕೋಕಮ್ ಜ್ಯೂಸ್, ಅರಿಶಿನಅಂಡಿ ಬಿತ್ತ, ದ್ಯಾವಣಿಗೆ ಉಪ್ಪಿನಕಾಯಿ ಎಂಬಂಥ ಉತ್ಪನ್ನಗಳ ಮೂಲಕವೇ ಪರಿಚಿತವಾಗಿದ್ದ ಪಶ್ಚಿಮಘಟ್ಟಗಳ ಈ ನಾಲ್ಕು ವೃಕ್ಷಪ್ರಭೇದಗಳ ಸಮಗ್ರಮಾಹಿತಿಯನ್ನು ಈ ಪುಸ್ತಕವು, ಆಕರ್ಷಕಶೈಲಿಯಲ್ಲಿ ಮುಂದಿಡುತ್ತದೆ.

ಆಕರ್ಷಕ ಶೈಲಿಯ ಆಪ್ತ ಧಾಟಿಯ ನಿರೂಪಣೆಯಿರುವ ಈ ಪುಸ್ತಕವನ್ನು ಪರಿಸರ ವಿಜ್ಞಾನಿ ಬಿ ಎಸ್ ಸೋಮಶೇಖರ ಅವರು ರಚಿಸಿದ್ದು ಲೈಫ್ ಟ್ರಸ್ಟ್‌ನ ನರಸಿಂಹ ಹೆಗಡೆ, ಅರಣ್ಯ ಕಾಲೇಜಿನ ಡಾ ವಾಸುದೇವ ಮತ್ತು ಪಶ್ಚಿಮಘಟ್ಟ ಕಾರ್ಯಪಡೆಯ ಅನಂತ ಹೆಗಡೆ ಆಶೀಸರ ಅವರ ತಾಂತ್ರಿಕ ಸಮಾಲೋಚನೆಯ ಹಲವು ಒಳನೋಟಗಳು ಇದಕ್ಕೆ ದಕ್ಕಿದೆ.

ಸ್ನೇಹಕುಂಜ, ಹೊನ್ನಾವರ, ಲೈಫ್ ಟ್ರಸ್ಟ್ ಶಿರಸಿ ಮತ್ತು ಗ್ಲೋಬಲ್ ಗ್ರೀನ್‌ಗ್ರಾಂಟ್‌ನ ನೆರವಿನಿಂದ ಸಿದ್ಧವಾದ ಈ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಅರಣ್ಯ ಸಂರಕ್ಷಣಾ ಸಮಿತಿಗಳು, ಸ್ಥಳೀಯ ಸಮುದಾಯಗಳು ಮತ್ತು ವಿಜ್ಞಾನಿಗಳು ಉಪಸ್ಥಿತರಿದ್ದರು.



